ಗಡಿ ಪ್ರದೇಶದ ರಸ್ತೆಗಳ ದುರಸ್ತಿ

೯೯೩. (೧೧೭೯) ಶ್ರೀ ಬಿ. ಕೆ. ವೆಂಕಟಶಿವ ರೆಡ್ಡಿ (ಶ್ರೀನಿವಾಸಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ : —

ಅ) ಕೆಳಕಂಡ ಗಡಿ ಪ್ರದೇಶದ್ದರಸ್ತೆಗಳು ಬಹಳ ಹಾಳಾದ ಪರಿಸ್ಥಿತಿಯಲ್ಲಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

೧) ಬೆಂಗಳೂರು – ಕಡಪ ರಸ್ತೆ

೨) ಗೌನಪಲ್ಲಿ – ಬಿ. ಕೊಟ್ಟಕೋಟಾ ರಸ್ತೆ

ಆ) ಹಾಗಿದಲ್ಲಿ ಈ ರಸ್ತೆಗಳನ್ನು ದುರಸ್ತಿ ಪಡಿಸಲು ಸರ್ಕಾರದ ಕ್ರಮವೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ರಸ್ತೆಗಳು ಬಹಳ ಹಾಳಾದ ಸ್ಥಿತಿಯಲ್ಲಿ ಇಲ್ಲ.

ಆ) ಈ ರಸ್ತೆಗಳನ್ನು ಲಭ್ಯವಿರುವ ನಿರ್ವಹಣಾ ಅನುದಾನದಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಿರ್ವಹಿಸಲಾಗುತ್ತಿದೆ. ಬೆಂಗಳೂರು-ಕಡಪ ರಸ್ತೆಯ ಕಿ.ಮಿ. ೪೯.೩೦ ರಿಂದ ೫೨.೦೦ನೇ ಕಿ.ಮಿ.ವರೆಗೆ ೫.೦೦ ಲಕ್ಷ ರೂ. ಅಂದಾಜಿನಲ್ಲಿ ೧೯೯೮–೯೧ರಲ್ಲಿ ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಇದೆ. ಹಾಗೂ ಗೌನಪಲ್ಲಿ–ಬಿ. ಕೊಟ್ಟಕೋಟೆ ರಸ್ತೆಯ ಅಭಿವೃದ್ಧಿಯನ್ನು ಗಡಿ ಪ್ರದೇಶ ರಸ್ತೆಗಳ ಅಭಿವೃದ್ಧಿಯಡಿ ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪಿಸಲಾಗುವುದು.

ಸಂಗ್ಗನಹಳ್ಳಿ – ಹೆಬ್ಬೂರು ರಸ್ತೆ ನಿರ್ಮಾಣದಲ್ಲಿ ವಿಳಂಬ

೯೯೪. (೧೪೪೨) ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ : —

ಅ) ೧೯೬೫ನೇ ಇಸವಿಯಲ್ಲಿ ತುಮಕೂರು ಮತ್ತು ಪಾವಗಡ ತಾಲ್ಲೂಕಿನಲ್ಲಿ ಬರುವ ಸುಗ್ಗನಹಳ್ಳಿಯಿಂದ ಹೆಬ್ಬೂರು ರಸ್ತೆ (ಅಂತರ ಜಿಲ್ಲಾ ಸಂಪರ್ಕ)ಯು ಲೋಕೋಪಯೋಗಿ ರಸ್ತೆಯಾಗಿ ಪ್ರಕಟಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಈ ರಸ್ತೆಯನ್ನು ಇದುವರೆವಿಗೂ ಏಕೆ ಪೂರ್ಣ ಮಾಡಿರುವುದಿಲ್ಲ?

ಇ) ಈ ರಸ್ತೆಯಲ್ಲಿ ಸಂಚರಿಸುವ ಜನತೆಗೆ ಅನಾನುಕೂಲ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ರಸ್ತೆಯನ್ನು ಎಂದು ಪೂರ್ಣಗೊಳಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ಸುಗ್ಗನಹಳ್ಳಿ – ಹೆಬ್ಬೂರು ರಸ್ತೆಯ ಭಾಗ (೧೯.೬೦ ಕಿ.ಮಿ. ಉದ್ದ) ವನ್ನು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯ ಹಳ್ಳಿ ರಸ್ತೆಯನ್ನಾಗಿ ೬೫ನೇ ಇಸವಿಯಲ್ಲಿ ಪ್ರಕಟಿಸಲಾಯಿತು. ಉಳಿದ ೫.೫ ಕಿ.ಮಿ. ರಸ್ತೆಯ ಭಾಗವನ್ನು ಸೆಪ್ಟೆಂಬರ್ ೧೯೮೪ನೇ ಇಸವಿಯಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಲಾಯಿತು. ಈಗ ಈ ರಸ್ತೆಯು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಇದೆ.

ಆ) ಈ ರಸ್ತೆಯ ೧೭.೧೦ ಕಿ.ಮಿ. ಒಟ್ಟು ಉದ್ದದ ರಸ್ತೆಯಲ್ಲಿ ೦.೧೫ ಕಿ.ಮಿ. ಉದ್ದ ಡಾಂಬರೀಕರಿಸಲಾಗಿದೆ. ೧೨.೨೫ ಕಿ.ಮಿ. ಉದ್ದಕ್ಕೆ ಜಲ್ಲಿಯನ್ನು ಹಾಕಲಾಗಿದೆ. ಉಳಿದ ೪.೭೦ಕಿ.ಮಿ. ಉದ್ದವು ಮಣ್ಣಿನ ರಸ್ತೆಯಾಗಿದೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ.